ನಂ:ಇಡಿ/ಕೆಇಎ/ಆಡಳಿತ/ಸಿಆರ್-29/2018-19 27-12-2018

## ದಿನಾಂಕ 28-12-2018ರಂದು ನಡೆಯಲಿರುವ ಆಫ್‌ಲೈನ್ ಕೌನ್ಸಿಲಿಂಗ್‌ಗೆ ಸೂಚನೆಗಳು

1) ಎಲ್ಲಾ ಅರ್ಹ ಅಭ್ಯರ್ಥಿಗಳು ಬೆಳಿಗ್ಗೆ 9.30ಕ್ಕೆ ಪ್ರಾಧಿಕಾರವು ನಡೆಸುವ ದಾಖಲಾತಿ ಪರಿಶೀಲನೆಗೆ ಕಡ್ಡಾಯವಾಗಿ ಹಾಜರಿರಬೇಕು.

2) ದಾಖಲಾತಿ ಪರಿಶೀಲನೆಗೆ ರ್‍ಯಾಂಕ್ ಪ್ರಕಾರ ಅಭ್ಯರ್ಥಿಗಳನ್ನು ಕರೆಯಲಾಗುವುದು.

3) ಎಲ್ಲಾ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ http://kar.nic.in ಪ್ರಕಟಿಸಿರುವ ಬ್ರೋಷರ್ ನಲ್ಲಿ ತಿಳಿಸಿರುವಂತೆ ದಾಖಲೆಗಳನ್ನು ಹಾಜರುಪಡಿಸಬೇಕು.

4) ತಿಳಿಸಿರುವ ದಾಖಲೆಗಳ ಮೂಲ ಪ್ರತಿಗಳನ್ನು ದಾಖಲಾತಿ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸಬೇಕು, ಪರಿಶೀಲಿಸಿದ ನಂತರ ಎಲ್ಲಾ ಮೂಲ ದಾಖಲಾತಿಗಳನ್ನು ಅಭ್ಯರ್ಥಿಗಳಿಗೆ ಹಿಂದಿರುಗಿಸಲಾಗುವುದು.

5) ಎಲ್ಲಾ ಮೂಲ ದಾಖಲೆಗಳ ಒಂದು ಸೆಟ್ ಫೋಟೋ ಪ್ರತಿಗಳನ್ನು ಕಡ್ಡಾಯವಾಗಿ ದೃಢೀಕರಿಸಿ ಹಾಜರುಪಡಿಸಬೇಕು.

6) SC/ST/Cat-1/2A/2B/3A/3B / 371J ಮೀಸಲಾತಿ ಕೋರುವ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ದಾಖಲೆಗಳನ್ನು ಹಾಜರುಪಡಿಸಬೇಕು.

7) 2A/2B/3A/3B ದೃಢೀಕರಣ ಪತ್ರವು ದೃಢೀಕರಣ ನೀಡಿದ ದಿನಾಂಕದಿಂದ 5 ವರ್ಷಗಳು ಚಾಲ್ತಿಯಲ್ಲಿರುತ್ತದೆ. ದಿನಾಂಕ 28-12-2018ರಂದು ಅದು ಚಾಲ್ತಿಯಲ್ಲಿರಬೇಕು.

8) ದಾಖಲಾತಿ ಪರಿಶೀಲನೆಯ ನಂತರ ಮಧ್ಯಾಹ್ನ 2.00ಗಂಟೆಯಿಂದ ಸೀಟು ಹಂಚಿಕೆ ಮಾಡಲಾಗುವುದು. ಸೀಟು ಹಂಚಿಕೆ ಸಮಯದಲ್ಲಿ ಕಡ್ಡಾಯವಾಗಿ ಅಭ್ಯರ್ಥಿ ಹಾಜರಿರಲೇಬೇಕು, ಅವರ ಪರವಾಗಿ ಬೇರೆಯವರಿಗೆ ಅವಕಾಶ ಇರುವುದಿಲ್ಲ.

9) ಸೀಟು ಹಂಚಿಕೆಯನ್ನು ಮಾಡುವಾಗ ರ್‍ಯಾಂಕ್‌ವಾರು ಅಭ್ಯರ್ಥಿಗಳನ್ನು ಕರೆಯಲಾಗುವುದು.

2

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012.
18th Cross, Sampige Road, Malleshwaram, Bangalore – 560 012.
Phone: 080-2356 4583, 2336 1786, Fax: 080-2346 1576
Website : http://kea.kar.nic.in e-mail : keauthority-ka@nic.in

10) ಸೀಟು ಪಡೆದ ಅಭ್ಯರ್ಥಿಗಳು ಕಡ್ಡಾಯವಾಗಿ ರೂ.300/-ರ ಡಿಡಿಯನ್ನು ಪ್ರಾಧಿಕಾರಕ್ಕೆ ನೀಡಬೇಕು.

11) ಈ ಡಿಡಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ನಿಂದ ಪಡೆದಿರಬೇಕು ಮತ್ತು Payable at Bangalore ಎಂದು ನಮೂದಿಸಿರಬೇಕು.

12) ಹಂಚಿಕೆ ಪಡೆದ ವಿದ್ಯಾರ್ಥಿಗಳು ದಿನಾಂಕ 31-12-2018ರೊಳಗೆ ಹಂಚಿಕೆ ಆದ ಕಾಲೇಜಿಗೆ ನಿಗದಿತ ಫೀ ಪಾವತಿಸಿ ಪ್ರವೇಶವನ್ನು ಪಡೆಯಬೇಕು.

13) ಒಮ್ಮೆ ಹಂಚಿಕೆ ಆದ ಸೀಟನ್ನು ರದ್ದು ಪಡಿಸಲು ಅವಕಾಶ ಇರುವುದಿಲ್ಲ.

14) ಒಮ್ಮೆ ಸೀಟು ಹಂಚಿಕೆ ಪ್ರಕ್ರಿಯೆ ಪ್ರಾರಂಭವಾದ ನಂತರ ಲಭ್ಯವಿರುವ ಎಲ್ಲಾ ಸೀಟುಗಳ ಹಂಚಿಕೆ ಪ್ರಕ್ರಿಯೆ ಮುಗಿಯುವವರೆಗೂ ಅಥವಾ ಕೊನೆಯ ಅಭ್ಯರ್ಥಿಯು ಸೀಟು ಭಾಗವಹಿಸುವವರೆಗೂ ಇದರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ನಡೆಸಲಾಗುವುದು.

ಆಡಳಿತಾಧಿಕಾರಿ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ